# ಕೆಂಬಾವುಟ

ವಿಶೇಷಾಂಕ 2023

ಸಂಪುಟ : 50

ಸಂಚಿಕೆ : 1–4

ಬೆಲೆ : ರೂ. 50/–

ಒಟ್ಟು ಪುಟಗಳು: 152

ದಿನಾಂಕ: 02–09–2023


# ಪರಿವಿಡಿ


| | | |
|---|---|---|
| ನಾವು, ನೀವು ಮತ್ತು 50 ವರ್ಷ...... | ಶಿವರಾಜ ರಾ. ಬಿರಾದಾರ | 6 |
| ಬಹುಮತದ ಅಹಂಕಾರ ತೊಲಗಲಿ | ಡಾ॥ ಸಿದ್ದನಗೌಡ ಪಾಟೀಲ | 9 |
| ಖಾಸಗೀಕರಣದಲ್ಲಿ ನರಳುತ್ತಿರುವ ಆರೋಗ್ಯ... | ಡಾ॥ ಶ್ರೀನಿವಾಸ ಕಕ್ಕಿಲ್ಲಾಯ | 19 |
| ಸಮಕಾಲೀನ ವಾಸ್ತವಗಳ ನಡುವೆ ಸ್ವಾತಂತ್ರ್ಯೋತ್ಸವ | ನಾ. ದಿವಾಕರ | 33 |
| ಕೆಂಪು ಬಾವುಟದ ಪ್ರಗತಿಯಲ್ಲಿ ಕೆಂಬಾವುಟದ ಪಾತ್ರ | ಪಿ. ಷಣ್ಮುಖಸ್ವಾಮಿ | 39 |
| ಚುನಾವಣಾ ಪ್ರಜಾಪ್ರಭುತ್ವ ಮತ್ತು ನೈಜ... | ಡಾ. ಪ್ರಕಾಶ ದೇಸಾಯಿ | 47 |
| 'ಸಮಾನತೆಯೆಡೆಗೆ'– ಒಂದು ಪ್ರಮುಖ... | ಡಾ. ಎನ್. ಗಾಯಿತ್ರಿ | 55 |
| ಬಂಡವಾಳವಾದ ಮತ್ತು ಮಾನವ ಮೃಗೀಯತೆ | ಅಯ್ಯಪ್ಪ ಹೂಗಾರ್ | 63 |
| ಮಾತಿಗೆ ಸಂವಿಧಾನ, ಕೃತಿಗೆ.....? | ಅಬ್ದುಲ್ ರೆಹಮಾನ್ ಪಾಷ | 75 |
| ಮೋದಿಯನ್ನು ಸೋಲಿಸಲು ಒಂಬತ್ತು ತಿಂಗಳು... | ಡಾ. ಬಿ. ಆರ್. ಮಂಜುನಾಥ | 87 |
| ಶ್ರೀಮಂತ ಮನಸ್ಸಿನ ಧೀಮಂತ ವ್ಯಕ್ತಿತ್ವಕ್ಕೆ ನೂರು... | ವಿ. ಕುಕ್ಯಾನ್, ಮಂಗಳೂರು | 99 |
| ಗಾಂಧೀಜಿಯವರ ನೆನಪನ್ನು ಅಳಿಸಲಾದೀತೇ? | ಮ. ಶ್ರೀಮುರಳಿಕೃಷ್ಣ | 107 |
| ಚಿಂತನೆಗಳು ಹೊಮ್ಮುವ ಸಕಾಲ | ನಳಿನ ಡಿ. ಚಿಕ್ಕಮಗಳೂರು | 111 |
| ಬಂಡಾಯ ಸಾಹಿತ್ಯದ ವಿವಿಧ ನೆಲೆಗಳು | ಡಾ. ಕಾ. ವೆಂ. ಶ್ರೀನಿವಾಸಮೂರ್ತಿ | 115 |
| ನಾ ಕಂಡ ರಾಷ್ಟ್ರೀಯತೆ | ಶ್ರಮ ಜೀವಿ... | 119 |
| ಪ್ರಜಾಪ್ರಭುತ್ವ, ಚುನಾವಣೆ ಮತ್ತು ಮತದಾರ | ಪ್ರೊ. ಸಿ.ವಿ.ಪಾಟೀಲ್, ಹರಿಹರ | 123 |
| ಈಕೆಯ ಮೇಲೆ ಹಾದು ಹೋದದ್ದು ಬರೋಬ್ಬರಿ... | ಮಹೇಶ ಬಳ್ಳಾರಿ | 127 |
| ಸ.ಹಿ.ಪ್ರಾ.ಶಾಲೆ, ಅತ್ತಿಕಟ್ಟೆ"... | ಪೂರ್ಣೇಶ್ ಮತ್ತಾವರ | 131 |
| ಸತ್ಯ ಪ್ರತಿಪಾದನೆಯ ಸಂಕಟ | ಬಿ.ಆರ್. ಪೋಲೀಸ್‌ಪಾಟೀಲ್ | 141 |
| ಕಲ್ಯಾಣವಾಗದ ಕಲ್ಯಾಣ ಕರ್ನಾಟಕ | ಡಾ. ಕೆ.ಎಸ್. ಜನಾರ್ಧನ್ | 143 |

ಕವನಗಳು – 17, 29, 37, 53, 59, 85, 97, 105, 121, 139



ಸಂಪಾದಕರು

ಶಿವರಾಜ ರಾ. ಬಿರಾದಾರ

ಸಂಪಾದಕ ಮಂಡಳಿ

ಡಾ. ಸಿದ್ದನಗೌಡ ಪಾಟೀಲ

ಪಿ. ವಿ. ಲೋಕೇಶ್


ಎಮ್. ಸತ್ಯಾನಂದ

ಜ್ಯೋತಿ ಎ.

ಬಿ. ಅಮ್ಜದ್

ಕೆ.ಎಸ್.ಜನಾರ್ಧನ್

# ಚುನಾವಣಾ ಪ್ರಜಾಪ್ರಭುತ್ವ ಮತ್ತು ನೈಜ ಪ್ರಜಾಪ್ರಭುತ್ವದ ರಕ್ಷಕರು



ಡಾ. ಪ್ರಕಾಶ ದೇಸಾಯಿ

**ಕೆ**ಲವು ದಶಕಗಳಿಂದ ಜಾಗತೀಕ ಮಟ್ಟದಲ್ಲಿ ನಡೆಯುತ್ತಿರುವ ಘಟನೆಗಳನ್ನು ವಿಚಾರಿಸಿದಾಗ ನಮ್ಮಲ್ಲಿ ಸಹಜವಾಗಿ ಬರುವ ಪ್ರಶ್ನೆ ಏನಂದರೆ– ಪ್ರಜಾಪ್ರಭುತ್ವಕ್ಕಾಗಿ ಚುನಾವಣೆಗಳು ಇರುತ್ತವೆಯೋ ಅಥವಾ ಚುನಾವಣೆಗಳಿಗಾಗಿ ಪ್ರಜಾಪ್ರಭುತ್ವ ಇರುತ್ತದೆ ಎಂಬುವದು. ಇಂತಹ ಪ್ರಶ್ನೆಗಳು ಮೂಡಲು ಹಲವಾರು ಕಾರಣಗಳಿವೆ. ಹಲವು ರಾಜಕೀಯ ಪಕ್ಷಗಳು ಮತ್ತು ಅವುಗಳ ಧುರೀಣರಿಂದ ಸ್ವಾರ್ಥಕ್ಕಾಗಿ ಪ್ರಚೋದಿಸಲ್ಪಟ್ಟ ಬಹುಸಂಖ್ಯಾತವಾದ ಈ ಕಾರಣಗಳಲ್ಲಿ ಒಂದಾಗಿದೆ. ಅಮೇರಿಕಾ, ಯುರೋಪ, ಆಫ್ರಿಕಾ ಮತ್ತು ಏಷ್ಯಾ ಖಂಡಗಳಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಗಳು ಎಂದು ಕರೆದುಕೊಂಡ ಅನೇಕ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳು ಮತ್ತು ಅವುಗಳ ಧುರೀಣರು ಚುನಾವಣೆಗಳನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದು ಅಲ್ಲಿರುವ ಪ್ರಜಾಪ್ರಭುತ್ವದ ತತ್ವಗಳಿಗೆ ವಿರೋಧಿಗಳಾಗಿ ಕೆಲಸ ಮಾಡಿದ್ದನ್ನು ಮರೆಯುವಂತಿಲ್ಲ. ಈ ಖಂಡಗಳ ಹಲವು ದೇಶಗಳಲ್ಲಿ ರಾಜಕೀಯ ಪಕ್ಷಗಳು ಉದಾರವಾದಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಬ್ಬಾಳಿಕೆ ಮತ್ತು ಜನಾಂಗೀಯ ಹಿಂಸೆಯಲ್ಲಿ ತೊಡಗಿದ್ದನ್ನು ನೋಡಲಾಗಿದೆ. ಈ ರೀತಿ ನಡೆದಿರುವ ದಬ್ಬಾಳಿಕೆ ಮತ್ತು ಹಿಂಸೆಗಳಿಂದ ಯಾವುದೇ ಭೂಖಂಡವನ್ನು ಹೊರತುಪಡಿಸಲಿಕ್ಕಾಗುವದಿಲ್ಲ. ಇದಕ್ಕಾಗಿಯೇ, ಸದ್ಯದ ಉದಾರವಾದಿ ರಾಜಕೀಯ ವ್ಯವಸ್ಥೆಗಳ ಕುರಿತು ರಾಜಕೀಯ ಸಂಶೋಧಕರಿಂದ ಹಲವಾರು ಸಂಶೋಧನೆಗಳು ಹೊರಬಂದಿವೆ. ಧರ್ಮ ಮತ್ತು ಜನಾಂಗದಂತಹ ಸಾಮಾಜಿಕ ಪಂಗಡಗಳನ್ನು ಉಪಯೋಗಿಸಿಕೊಂಡು ವಿವಿಧ ದೇಶಗಳಲ್ಲಿ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತ ರಾಜಕೀಯ ವ್ಯವಸ್ಥೆಯನ್ನಾಗಿ ಮಾಡಿರುವದನ್ನು ನೋಡಬಹುದು. ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ರೂಢಿ ಮತ್ತು ತತ್ವಗಳನ್ನು ರಾಜಕೀಯ ಪಕ್ಷಗಳ ಅಸ್ತಿತ್ವಕ್ಕಾಗಿ ಬಳಸಿಕೊಂಡರೆ ಪ್ರಜಾಪ್ರಭುತ್ವಕ್ಕೆ ನಿಜವಾದ ಗೌರವ ಸಿಗುವದಿಲ್ಲ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಹುಸಂಖ್ಯಾತವಾದದ ಆಚರಣೆಗಳನ್ನು ಯಾವುದೇ ಸಮಾಜ ಅನುಸರಿಸಿದರೇ ಆ ಸಮಾಜದ ಸಾಮೂಹಿಕ ಮಾನಸಿಕತೆಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಉದಾರವಾದಿ ಬಹುಸಂಖ್ಯಾತ ರಾಜಕೀಯ ವ್ಯವಸ್ಥೆಗಳು ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ಮರೆತರೆ, ಅಯೋಗ್ಯರು ಉನ್ನತ ಸ್ಥಾನಗಳಲ್ಲಿ ಕೂಡಬಹುದು. ಪ್ರಜಾಪ್ರಭುತ್ವವೆಂಬುವದು ಸಮನಾಗಿ ಅನುಭವಿಸುವ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಯೋಜನೆ. ಪ್ರಜಾಪ್ರಭುತ್ವ ಎಂದರೇ ಕೆವಲ ಚುನಾವಣೆಗಳಲ್ಲ, ಕೇವಲ ರಾಜಕೀಯ ಪಕ್ಷಗಳಲ್ಲ, ಈ ಲೇಖನದ ಪರಿಚಯದ ಭಾಗವಾಗಿ ಈ ಮಾತುಗಳನ್ನು ವ್ಯಕ್ತಪಡಿಸಬೇಕಾದ ಕಾರಣವೇನಂದರೇ ನಮ್ಮ ದೇಶದಲ್ಲಿ ಈಗ ಕಾಣುತ್ತಿರುವ ಪ್ರಜಾಪ್ರಭುತ್ವದ ಕೆಲವೊಂದು ಲಕ್ಷಣಗಳ ಕೊರತೆ. ಹೊಣೆಗಾರಿಕೆ ಇಲ್ಲದ ರಾಜಕೀಯ ವ್ಯವಸ್ಥೆಯಾಗಿ ನಮ್ಮ ಪ್ರಜಾಪ್ರಭುತ್ವ ಬದಲಾಗುತ್ತಿದೆಯೇ ಎಂಬ ಸಂಶಯ ಕೂಡಾ ಬರುತ್ತದೆ.

2024ರಲ್ಲಿ ಬರುವ ಚುನಾವಣೆ ದೇಶದ ಭವಿಷ್ಯಕ್ಕಾಗಿ ನಿರ್ಣಾಯಕ ಚುನಾವಣೆಯಾಗಿದೆ. ಬಹುತ್ವ ಸಮಾಜದ ಉಳಿವು, ಜಾತ್ಯಾತೀತ ತತ್ವದ ಪಾಲನೆ ಮತ್ತು ಸಮಗ್ರ ಅಭಿವೃದ್ಧಿಗಾಗಿ ಪ್ರಗತಿಪರ ಮತ್ತು ಮಾನವೀಯ ಸರ್ಕಾರದ ಅವಶ್ಯವಿದೆ. ಇಂತಹ ಸರ್ಕಾರ ರಚನೆಯಾಗಬೇಕಾದರೇ ಸಾಮಾನ್ಯ ಜನರಲ್ಲಿ ಪ್ರಜಾಸತ್ತಾತ್ಮಕ ಪ್ರಜ್ಞೆಯ ಅವಶ್ಯವಿದೆ. ಚುನಾವಣಾ ಪ್ರಜಾಪ್ರಭುತ್ವದ ಜೊತೆಗೆ ಮತ್ತು ರಾಜಕೀಯ ವ್ಯವಸ್ಥೆಯನ್ನು ನೈಜ ಪ್ರಜಾಪ್ರಭುತ್ವ ಮಾಡುವದು ಹೇಗೆ ಮತ್ತು ಅದರ ರಕ್ಷಣೆ ಮತ್ತು ಪಾಲನೆ ಯಾರಿಂದ ಸಾಧ್ಯ ಎಂಬ ಪ್ರಶ್ನೇ ಅಥವಾ ವಿಷಯಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗಬೇಕಾಗಿದೆ. ರಾಜ್ಯಶಾಸ್ತ್ರದ ಸಂಶೋಧನಾ ಲೋಕದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಇರುವ ಬಹು ದೊಡ್ಡ ನಂಬಿಕೆ ಏನಂದರೇ, ರಾಜಕೀಯ ಪಕ್ಷಗಳಿಲ್ಲದೆ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಿಲ್ಲ ಎಂದು. ಇದನ್ನು ಮತ್ತಷ್ಟು ಹೇಳಬೇಕಂದರೇ, ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ರಕ್ಷಕರಾಗಿ ಉಳಿಯಬೇಕು ಮತ್ತು ಅದರ ರಕ್ಷಣೆಗೆ ಯಾರೇ ಸಹಿತ ಭಾಗಿಯಾದರೂ ಅವರಿಗೆ ಬೆಂಬಲ ಕೊಡಬೇಕು. ಈ ಕೆಲಸ ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳಿಂದ ನಡೆಯುತ್ತಿದೆಯೋ– ಇಲ್ಲವೋ ಎಂಬುವದನ್ನು ತಿಳಿಯುವದು ಅವಶ್ಯವಾಗಿದೆ. ಭಾರತದ ರಾಜಕೀಯ ಪಕ್ಷಗಳ ಬಗ್ಗೆ ಈಗಾಗಲೇ ಅನೇಕ ಪ್ರಮುಖ ತಜ್ಞರು ಸಾಕಷ್ಟು ಸಂಶೋಧನೆ ಮಾಡಿ ಸಿದ್ಧಾಂತದ ಆಧಾರದ ಮೇಲೆ

ಅವುಗಳ ವರ್ಗೀಕರಣ ಮಾಡಿದ್ದಾರೆ. ಪ್ರಸ್ತುತ, ಅವುಗಳ ವರ್ಗೀಕರಣ ಮತ್ತು ವಿಶ್ಲೇಷಣೆ, ಹಿಂದಿನ ಮತ್ತು ಸದ್ಯದ ನಡೆ-ನುಡಿಗಳ ಆಧಾರದ ಮೇಲೆ ಮಾಡುವ ಚಿಕ್ಕ ಪ್ರಯತ್ನ ಈ ಚಿಕ್ಕ ಪ್ರಬಂಧದಲ್ಲಿ ಮಾಡಲು ದೇಶದ ರಾಜಕೀಯ ಸಂಕೀರ್ಣತೆ ಮತ್ತು ಗೊಂದಲ ಕಾರಣವೆಂದು ಹೇಳಿದರೆ ತಪ್ಪೆನಿಸದು.


ದೇಶದ ಬಹುತೇಕ ರಾಜಕೀಯ ಪಕ್ಷಗಳಲ್ಲಿ ಸೈದ್ಧಾಂತಿಕ ಪ್ರಾಮಾಣಿಕತೆ ನಿರೀಕ್ಷಿಸುವ ಮಟ್ಟದಲ್ಲಿ ಕಂಡು ಬರುವದಿಲ್ಲ. ತಮ್ಮನ್ನು ತಾವೇ ಕೆಲವು ಸಿದ್ಧಾಂತಗಳಿಗೆ ಬದ್ಧವಾದ ಪಕ್ಷಗಳೆಂದು ಕರೆದುಕೊಂಡರೂ ಅವುಗಳ ಬದ್ಧತೆ ಪ್ರಶ್ನಾರ್ಹವಾಗಿದೆ. ಪ್ರಜಾಪ್ರಭುತ್ವದ ಮೂಲಭೂತ ತತ್ವಗಳ ರಕ್ಷಣೆಯ ಬಗ್ಗೆ ವಿಚಾರಿಸುವದಾದರೇ, ಅವುಗಳ ನಡೆ-ನುಡಿಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಬಹುದು. ಮೊದಲನೇಯದಾಗಿ ಉದಾರವಾದಿ ಪಕ್ಷಗಳಿಂದ ಪ್ರಾರಂಭಿಸೋಣ. ಕಾಂಗ್ರೆಸ್ ಪಕ್ಷವು ಅನೇಕ ಸಿದ್ಧಾಂತಗಳ ಸಂಗಮವಾಗಿರುವದರಿಂದ ಅದನ್ನು ಉದಾರವಾದಿ ಪಕ್ಷವೆಂದು ಕರೆಯುವದೇ ಒಳಿತು. ಪಕ್ಷವು ನೆಹರುರವರ ನೇತೃತ್ವದಲ್ಲಿದ್ದಾಗ ಚುನಾವಣೆಯಲ್ಲಿ ಪಕ್ಷಕ್ಕಾಗಿ ಪ್ರಚಾರ ಮಾಡುವದಲ್ಲದೇ ಪ್ರಜಾಪ್ರಭುತ್ವಕ್ಕಾಗಿ ಪ್ರಚಾರ ಮಾಡಿತು. ನೆಹರುರವರ ಈ ಕೆಲಸ ಶ್ಲಾಘನೀಯ. ಆದರೇ, ಮುಂದಿನ ಹಲವು ದಶಕಗಳವರೆಗೆ ಪಕ್ಷವು ಈ ಲಕ್ಷಣವನ್ನು ತೋರಿಸಲಿಲ್ಲ. ಮುಂದೆ ಸೋನಿಯಾ ಗಾಂಧಿರವರ ನೇತೃತ್ವದಲ್ಲಿ ಪಕ್ಷವು ಕೆಲ ಮಟ್ಟಿಗೆ ಈ ನಿಟ್ಟಿನಲ್ಲಿ ಕೆಲಸ ಮಾಡಿತಾದರೂ ಕೋಮುವಾದಿ ಶಕ್ತಿಗಳನ್ನು ರಾಜಕೀಯವಾಗಿ ವಿಫಲಮಾಡಲು ಸಫಲತೆ ಕಾಣಲಿಲ್ಲ. ಸದ್ಯದಲ್ಲಿ, ಪ್ರಿಯಾಂಕಾ ಮತ್ತು ರಾಹುಲ ಗಾಂಧಿರವರು ಪ್ರೀತಿ-ವಿಶ್ವಾಸ ಮತ್ತು ಸಮಗ್ರ-ಮಾನವೀಯ ಅಭಿವೃದ್ಧಿಯ ರಾಜಕೀಯ ನಿರೂಪಣೆ ಹರಡುತಿದ್ದಾರೆ. ಈ ಕೆಲಸ ಎಷ್ಟರ ಮಟ್ಟಿಗೆ ಸಫಲವಾಗುವದು ಎಂಬುವದನ್ನು ಕಾದು ನೋಡಬೇಕು. ಪಕ್ಷದ ಜಾತ್ಯಾತೀತತೆ ತತ್ವದ ಕುರಿತು ಹೇಳಬೇಕಾದರೇ, ಪಕ್ಷವು ಕೋಮುವಾದಿ ಸಂಘ-ಸಂಸ್ಥೆಗಳ ಅಪಾಯಕಾರಿ ಚಟುವಟಿಕೆಗಳನ್ನು ತಡೆಯುವಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಂಡು ಅಲ್ಪಸಂಖ್ಯಾತರ ಮೇಲೆ ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ದಬ್ಬಾಳಿಕೆಗಳನ್ನು ಸಂಪೂರ್ಣ ಮಟ್ಟಿಗೆ ತಡೆಯಲಿಕ್ಕಾಗಲಿಲ್ಲ. ಕಾಂಗ್ರೆಸ್ ಪಕ್ಷವು ತನ್ನ ಆಡಳಿತದ ಅವಧಿಯಲ್ಲಿ (ಕಾಂಗ್ರೆಸ್ ನೇತೃತ್ವದ ಒಕ್ಕೂಟ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳು) ಈ ನಿಟ್ಟಿನಲ್ಲಿ ಕಟ್ಟು ನಿಟ್ಟಾದ ಕೆಲಸ ಮಾಡಬಹುದಾಗಿತ್ತು. ಆದರೇ, ಈ ಕೆಲಸ ಪಕ್ಷವು ಮಾಡಲಿಲ್ಲ. ಹಲವು ಬಾರಿ ಪಕ್ಷವು ಮೃದು ಹಿಂದುತ್ವದ ಧೋರಣೆಯನ್ನು ಕೂಡಾ ತೋರಿದೆ. ಇಂದಿರಾ ಗಾಂಧಿಯವರ ಹತ್ಯೆಯ ನಂತರ ದೇಶದಲ್ಲಿ ಸಿಖ್ ಸಮುದಾಯದ ಮೇಲೆ ನಡೆದ ಗಲಭೆಗಳಲ್ಲಿ ಪಕ್ಷದ ಕೆಲವು ಧುರೀಣರ ಪಾತ್ರಗಳ ಬಗ್ಗೆ ಮಾಧ್ಯಮಗಳಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇಲ್ಲಿ ಹೇಳಲೇಬೇಕಾದ ವಿಷಯವೇನಂದರೇ, ನೆಹರು ನಂತರದ ಮತ್ತು ಸೋನಿಯಾ ಗಾಂಧಿ ನೇತೃತ್ವದ ಮುಂಚೆಯ ಕಾಂಗ್ರೆಸ್ ಪಕ್ಷವು ಜಾತ್ಯಾತೀತ ತತ್ವದ ಕುರಿತು ಒಂದು ವಿಚಿತ್ರ ಸಂಕೀರ್ಣತೆಯನ್ನು ತೋರಿದೆ. ಇತ್ತೀಚೆಗೆ ಹಲವು ರಾಜ್ಯಗಳಲ್ಲಿ ಪಕ್ಷವು ಕಂಡ ಚುನಾವಣಾ ಸಫಲತೆಯು ಆಯಾ ರಾಜ್ಯದ ಹಲವು ಪ್ರಾಮಾಣಿಕ ನಾಯಕರಿಂದ ಮತ್ತು ಕಾರ್ಯಕರ್ತರಿಂದ. ಕೆಲಮಟ್ಟಿಗೆ, ರಾಹುಲ ಮತ್ತು ಪ್ರೀಯಾಂಕಾ ಗಾಂಧಿರವರ ನಾಯಕತ್ವವೂ ಕೂಡಾ ಕಾರಣವಾಗಿದೆ.

ದೇಶದ ರಾಜಕೀಯದಲ್ಲಿ ಸಮಾಜವಾದಿ ಪಕ್ಷಗಳು ಕೂಡಾ ತಮ್ಮದೇಯಾದ ಪಾತ್ರವನ್ನು ವಹಿಸಿವೆ. ಇವುಗಳಿಗೂ ಕೂಡಾ ಸ್ವತಂತ್ರ ಪೂರ್ವ ಇತಿಹಾಸವಿದ್ದರೂ ದೇಶದ ಸ್ವತಂತ್ರ ನಂತರದ ರಾಜಕೀಯದಲ್ಲಿ ಕೆಲವು ಬಾರಿ ಕಾಂಗ್ರೆಸ್ ವಿರೋಧಿ ಶಕ್ತಿಗಳಾಗಿ, ಕೆಲವು ಬಾರಿ ಭಾರತೀಯ ಜನತಾ ಪಕ್ಷದ ಮಿತ್ರ ಪಕ್ಷಗಳಾಗಿ ಕೆಲಸ ಮಾಡಿವೆ. ಜನತಾ ಪರಿವಾರದ ಭಾಗಗಳೆಂದು ಗುರುತಿಸಲ್ಪಟ್ಟಿರುವ ಪಕ್ಷಗಳಾದ ಸಂಯುಕ್ತ ಜನತಾ ದಳ, ರಾಷ್ಟ್ರೀಯ ಜನತಾ ದಳ, ಸಮಾಜವಾದಿ ಜನತಾ ಪಕ್ಷ, ಇತ್ಯಾದಿ ಪಕ್ಷಗಳು ದೇಶದ ಹಲವು ರಾಜ್ಯಗಳಲ್ಲಿ ಸಕಾರವನ್ನು ರಚಿಸಿ ಸಮಾಜವಾದಿ ಸಿದ್ಧಾಂತದ ಅನುಗುಣವಾಗಿ ಜನಪರ ಆಡಳಿತ ಕೊಟ್ಟಿವೆ ಮತ್ತು ಕೊಡತಾ ಇವೆ. ಆದರೆ, ಅಧಿಕಾರಕ್ಕಾಗಿ ಇವುಗಳಲ್ಲಿ ಕೆಲವು ಪಕ್ಷಗಳು ಸೈದ್ಧಾಂತಿಕ ವಿಚಲನರಾಗಿ ಕೋಮುವಾದಿ ಪಕ್ಷಕ್ಕೆ ಬೆಂಬಲ ಕೊಟ್ಟು ಒಕ್ಕೂಟದ ಸಮ್ಮಿಶ್ರ ಸರ್ಕಾರಗಳ ಭಾಗಿಗಳಾಗಿದ್ದನ್ನು ಕಂಡಿದ್ದೇವೆ. ಹೀಗಾಗಿ, ಇವುಗಳ ಸೈದ್ಧಾಂತಿಕ ವಿಶ್ವಾಸಾರ್ಹತೆಯ ಬಗ್ಗೆ ಯಾವುದೇ ವಿಶ್ವಾಸ ಇಡುವ ಹಾಗಿಲ್ಲ. ಇವುಗಳಲ್ಲಿ ಬಹಳಷ್ಟು ಪಕ್ಷಗಳು, ಆಯ್ದ ಜಾತಿ ಅಭ್ಯುದಯದಲ್ಲಿ ಮುಂದಾಗಿ ಜಾತಿ ರಾಜಕೀಯ ಮಾಡುತ್ತಾ ತಮ್ಮ ಸೈದ್ಧಾಂತಿಕ ಪ್ರಾಮುಖ್ಯವನ್ನು ಕಳೆದುಕೊಂಡಿವೆ. ಕೋಮುವಾದಿ ಪಕ್ಷವಾದ ಬಿಜೆಪಿಯಿಂದ ಇವುಗಳ ಅಸ್ತಿತ್ವಕ್ಕೆ ಮತ್ತು ಇವುಗಳು ಅಭ್ಯುದಯ ಮಾಡಬೇಕೆನ್ನುವ ಹಿಂದುಳಿದ ಜಾತಿಗಳ ಸಬಲೀಕರಣಕ್ಕೆ ಧಕ್ಕೆ ಇದ್ದರೂ ಬಿಜೆಪಿ ಜೊತೆಗೆ ರಾಜಕೀಯ ಮೈತ್ರಿ ಬೆಳೆಸಲು ಮುಂದಾಗುತ್ತವೆ. ಇದಕ್ಕೆ ಪರಿಪೂರ್ಣ ಉದಾಹರಣೆಯೆಂದರೆ ನಮ್ಮ ರಾಜ್ಯದಲ್ಲಿರುವ ಜಾತ್ಯಾತೀತ ಜನತಾ ದಳ ಮತ್ತು ಬಿಹಾರ್‌ದಲ್ಲಿರುವ ಸಂಯುಕ್ತ ಜನತಾ ದಳ.

ಪ್ರಾದೇಶಿಕ ಪಕ್ಷಗಳು ನಮ್ಮ ದೇಶದ ಬಹುತ್ವ ಸಮಾಜದ ರಾಜಕೀಯ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತವೆ. ಬಹುತ್ವ ಸಮಾಜದ ರಕ್ಷಣೆಯಲ್ಲಿ ಅವುಗಳ ಪಾತ್ರ ಗಣನೀಯ. ಜನಾಂಗೀಯ ಮತ್ತು ಭಾಷೆಯ ಆಧಾರದ ಮೇಲೆ ದೇಶದ ಕೆಲವು ಪ್ರಾಂತ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳನ್ನು ಕಾಣಬಹುದು. ಅವುಗಳ ರಾಜಕೀಯ ಆಯಾ ಪ್ರಾಂತ್ಯಗಳಿಗೆ ಸೀಮಿತವಾಗಿ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸ್ವಾಯತ್ತತೆ ಕುರಿತು ಬಹಳಷ್ಟು ಗೋಚರಗೊಳ್ಳುತ್ತದೆ. ನಕಾರಾತ್ಮವಾಗಿ ಹೇಳುವದಾದರೆ ಇವುಗಳಲ್ಲಿ ಕೆಲವು, ತಮ್ಮ ರಾಜ್ಯದ ಜನರ ಆರ್ಥಿಕ ಹಿಂದುಳಿದಿರುವಿಕೆಗೆ ಬೇರೆ ರಾಜ್ಯದಿಂದ ಬಂದು ನೆಲೆಸಿರುವ ನಾಗರಿಕರು ಕಾರಣರೆಂದು ದೂರುತ್ತವೆ. ರಾಜ್ಯದಲ್ಲಿರುವ ಆರ್ಥಿಕ ಅವಕಾಶಗಳನ್ನು ಬೇರೆ ರಾಜ್ಯದವರು ಅನುಭವಿಸುತ್ತಿದ್ದಾರೆ ಎಂಬುವದು ಇವುಗಳಲ್ಲಿ ಕೆಲವು ಪಕ್ಷಗಳ ಆರೋಪ. ಈ ಅತೃಪ್ತಿ ಹಲವು ಬಾರಿ ಹಿಂಸಾತ್ಮಕ ರೂಪವನ್ನು ಪಡೆದುಕೊಂಡಿದೆ. ಸ್ಥಳೀಯರು ಮತ್ತು ಹೊರಗಿನವರ ನಡುವೆ ಕಲಹಗಳು ಪ್ರಾರಂಭವಾಗಿ ಇವುಗಳಲ್ಲಿ ಎರಡೂ ಕಡೆಯಿಂದ ಸಾಮಾನ್ಯ ಬಡ ಜನರೇ ಬಲಿಪಶು ಆಗಿದ್ದನ್ನು ನೋಡಿದ್ದೇವೆ. ಶಿವಸೇನಾ ಪಕ್ಷವು ರಾಜಕೀಯ ಲಾಭ ಪಡೆದುಕೊಳ್ಳಲು ಮಾಹಾರಾಷ್ಟ್ರ ರಾಜ್ಯದಲ್ಲಿ ಸ್ಥಳೀಯರು ಮತ್ತು ಹೊರಗಿನವರು ಎಂಬ ವಿಷಯದ ಮೇಲೆ ರಾಜಕೀಯ ಮಾಡುತ್ತಾ ಬಂದಿದೆ. ಈ ರೀತಿಯ ರಾಜಕೀಯಕ್ಕೆ ತನ್ನದೇಯಾದ ಕಾರಣಗಳಿದ್ದರೂ ಕೂಡಾ ಪಕ್ಷಗಳು ವಿಪರೀತ ಮಾರ್ಗಕ್ಕೆ ಹೋಗಕೂಡದು ಮತ್ತು ಹೋಗುವ ಅವಶ್ಯಕತೆ ಇಲ್ಲ. ತೆಲುಗು ದೇಶಂ ಪಕ್ಷವು ರಾಜಕೀಯವನ್ನು ಭಾಷೆಯ ಆಧಾರದ ಮೇಲೆ ಪ್ರಾರಂಭ ಮಾಡಿತಾದರೂ, ಯಾವುದೇ ತರಹದ ವಿಪರೀತ ರಾಜಕೀಯಕ್ಕೆ ಹೋಗಲಿಲ್ಲ. ಪ್ರಾದೇಶಿಕ ಪಕ್ಷಗಳಲ್ಲಿ ತಮಿಳುನಾಡಿನ ಪಕ್ಷಗಳು ವಿಶೇಷ ಎಂದು ಹೇಳಬೇಕಾದರೆ, ಅವುಗಳು ಸಮಾಜ ಬದಲಾವಣೆಯಲ್ಲಿ ತೆಗೆದುಕೊಂಡ ನಿಲುವು ಮತ್ತು ಪ್ರಯೋಗಗಳು. ಈ ರಾಜ್ಯದಲ್ಲಿ ಆಡಳಿತ ಕೊಟ್ಟ ದ್ರಾವಿಡ ಪಕ್ಷಗಳಾದ ಡಿಎಮಕೆ ಮತ್ತು ಎಐಡಿಮಕೆಯು ಜನಪರ ಕಲ್ಯಾಣ ನಿಟ್ಟಿನಲ್ಲಿ ಕೆಲಸಗಳು ಮಾಡಿವೆ. ಆದರೆ, ಅಧಿಕಾರಕ್ಕಾಗಿ ಭಾರತೀಯ ಜನತಾಪಕ್ಷದ ಜೊತೆ ಮೈತ್ರಿಯನ್ನು ಬೆಳೆಸಿರುವ ಇತಿಹಾಸ ಇರುವದರಿಂದ ಇವುಗಳ ಭವಿಷ್ಯದ ರಾಜಕೀಯ ನಡೆ-ನುಡಿಗಳ ಬಗ್ಗೆ ಹೇಳುವದು ಕಠಿಣ.

ಬಹುತೇಕ ಪಕ್ಷಗಳಲ್ಲಿ ಒಂದಲ್ಲ ಒಂದು ಸಮಸ್ಯೆ ಇರುವದಾದರೇ ನಮ್ಮ ದೇಶ ಮತ್ತು ಸಮಾಜಕ್ಕೆ ಪಕ್ಷರಹಿತ ಪ್ರಜಾಪ್ರಭುತ್ವದ ಅವಶ್ಯಕತೆ ಇದೆಯೇ? ಸಾಮಾನ್ಯ ಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಇದ್ದರೇ ಪಕ್ಷರಹಿತ ಪ್ರಜಾಪ್ರಭುತ್ವದ ಅವಶ್ಯಕತೆ ಬರುವದಿಲ್ಲ. ಪ್ರಗತಿಪರ ಮತ್ತು ಎಡ ಪಕ್ಷಗಳ ಜೊತೆ ಜೊತೆಗೆ ನಾಗರಿಕ ಸಮಾಜದ ಸಂಘ-ಸಂಸ್ಥೆಗಳು ಪ್ರಜಾಪ್ರಭುತ್ವದ ಅಡಿಯಲ್ಲಿ ದೇಶದ ಸಮಗ್ರ ಅಭಿವೃದ್ಧಿ ಆಗುವಂತೆ ಬಹುಮುಖ್ಯ ಪಾತ್ರವನ್ನು ವಹಿಸಬಹುದು. ಸಾಮಾನ್ಯ ಜನರು ರಾಜಕೀಯ

ಮತ್ತು ಸಾಮಾಜಿಕ ಅರಿವನ್ನು ಗುರುವನ್ನಾಗಿ ಮಾಡಿಕೊಂಡು ರಾಜಕೀಯ ಪಕ್ಷಗಳಲ್ಲಿ ಪ್ರಜಾಸತ್ತಾತ್ಮಕ ಹೊಣೆಗಾರಿಕೆಯನ್ನು ಕಲಿಸಬೇಕು. ಒಂದರ್ಥದಲ್ಲಿ ನೋಡಿದರೆ, ನಮ್ಮ ದೇಶದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪ್ರಜಾಪ್ರಭುತ್ವೀಕರಣ ಅತ್ಯವಶ್ಯವಾಗಿದೆ. ಆಂತರಿಕ ಪ್ರಜಾಪ್ರಭುತ್ವೀಕರಣ ಮತ್ತು ಸ್ವವಿಮರ್ಶೆಗಳ ಕೊರತೆ ಬಹುತೇಕ ಪಕ್ಷಗಳಲ್ಲಿ ಕಾಣಬಹುದು. ಕೋಮುವಾದಿ ಪಕ್ಷಗಳ ಬಗ್ಗೆ ಹೇಳಬೇಕಂದರೇ, ಇಂತಹ ಪಕ್ಷಗಳಿಂದಲೇ ಪ್ರಜಾಪ್ರಭುತ್ವ ಹಾಳಾಗುತ್ತಿರುವಾಗ ಅವುಗಳಿಂದ ಪ್ರಜಾಪ್ರಭುತ್ವದ ರಕ್ಷಣೆ ಸಾಧ್ಯವೇ? ಭಾರತೀಯ ಜನತಾ ಪಕ್ಷ ಮತ್ತು ಅದರ ಅಪರೋಕ್ಷ ಸಹಾಯಕ ಸಂಘ–ಸಂಸ್ಥೆಗಳ ಧುರೀಣರು ದೇಶದಲ್ಲಿ ನಡೆದಿರುವ ಅನೇಕ ಕೋಮು ಆಧಾರಿತ ಗಲಭೆಗಳಲ್ಲಿ ಭಾಗಿಯಾಗಿರುವದು ಸಾರ್ವಜನಿಕ ವಲಯಕ್ಕೆ ಗೊತ್ತಿರುವ ವಿಷಯ, ಕೋಮು ಆಧಾರಿತ ವಿಷಯಗಳಿಗೆ ಈ ಪಕ್ಷವು ತೋರುವ ಸೂಕ್ಷ್ಮತೆ ಸಮಗ್ರ ಜನತಾ ಕಲ್ಯಾಣದ ಕುರಿತು ತೋರಿಸುವದಿಲ್ಲ. ಮುಂಬರುವ ಲೋಕಸಭಾ ಚುನಾವಣೆ ಕೋಮುವಾದ ವಿರೋಧಿ ಜಾತ್ಯಾತೀತ ತತ್ವದ, ಸಂಪತ್ತಿನ ಕೇಂದ್ರೀಕರಣ ವಿರೋಧಿ ಸಮಗ್ರ ಜನ ಕಲ್ಯಾಣದ ಜನಪರ ಶಕ್ತಿಗಳ ಪ್ರಜಾಸತ್ತಾತ್ಮಕ ಅಹಿಂಸಾವಾದಿ ಸಮರವಾಗಬೇಕಾಗಿದೆ. ಇಂತಹ ಸಾಧ್ಯತೆಗಳು, ದೇಶದಲ್ಲಿರುವ ಎಡ ಪಕ್ಷಗಳಿಂದ ಮಾತ್ರ ಸಾಧ್ಯವೆನ್ನಲು ಹಲವಾರು ಕಾರಣಗಳನ್ನು ಕೊಡಬಹುದು. ದೇಶದ ಯಾವುದೇ ಎಡ ಪಕ್ಷವು ಜಾತ್ಯಾತೀತ ತತ್ವದ ಬಗ್ಗೆ ಯಾವುದೇ ರಾಜಿ ಮಾಡಿಕೊಂಡಿಲ್ಲ. ಜನಪರ ಕಲ್ಯಾಣ ಕೆಲಸಗಳಲ್ಲಿ ಎಡ ಪಕ್ಷಗಳ ಸರ್ಕಾರವು ಶ್ಲಾಘನೀಯ ಕೆಲಸ ಮಾಡಿರುವದನ್ನು ದೇಶ ಮತ್ತು ವಿದೇಶಗಳ ಸಂಶೋಧಕರ ಸಂಶೋಧನೆಗಳಲ್ಲಿ ಮೂಡಿ ಬಂದಿವೆ. ಉದಾರವಾದಿ ಪ್ರಗತಿಪರ ಪಕ್ಷಗಳು ಮತ್ತು ಇತರೆ ಪಕ್ಷಗಳು ಪ್ರಜಾಸತ್ತಾತ್ಮಕ ಮಾರ್ಗದಿಂದ ಎಡವಿದಾಗ ಅವುಗಳಿಗೆ ಮಾರ್ಗದರ್ಶನ ಮಾಡುವ ನೈತಿಕ ಅಧಿಕಾರ ಎಡಪಕ್ಷಗಳಿಗಿದೆ. ಒಂದರ್ಥದಲ್ಲಿ, ಎಡಪಕ್ಷಗಳನ್ನು ಪ್ರಜಾಪ್ರಭುತ್ವದ ಕಾರ್ಯಾಗಾರಗಳೆಂದು ಕರೆಯಬಹುದು. ಆಂತರಿಕ ಶಿಸ್ತು ಮತ್ತು ಪ್ರಜಾಪ್ರಭುತ್ವೀಕರಣ ಬಗ್ಗೆ ಹೇಳುವದಾದರೆ, ಮಿಕ್ಕ ಪಕ್ಷಗಳಿಗಿಂತ ಬಲುವಾಸಿ. ದೇಶದಲ್ಲಿ ಕೊರೋನ ಪಿಡುಗಿನ ಕಠಿಣ ಸಮಯದಲ್ಲಿ ಕೆಲವು ಆಡಳಿತ ಪಕ್ಷಗಳ (ಒಕ್ಕೂಟ ಮತ್ತು ರಾಜ್ಯಗಳ) ರಾಜಕೀಯ ಭಾಷೆಯು ಬಂಡವಾಳಶಾಹಿಯಾದರೆ ಎಡಪಕ್ಷಗಳ ಭಾಷೆ ಮಾನವೀಯ ಜನಕಲ್ಯಾಣದ ಭಾಷೆಯಾಗಿತ್ತು. ದೇಶದ ಭವಿಷ್ಯಕ್ಕಾಗಿ ಮುಂದೆ ಬರುವ ಚುನಾವಣೆಯಲ್ಲಿ ಕೋಮುವಾದಿ ವಿರೋಧಿ ಎಡ ಮತ್ತು ಪ್ರಗತಿಪರ ಉದಾರವಾದಿ ಪಕ್ಷಗಳ ಮೈತ್ರಿಯ ಒಕ್ಕೂಟವನ್ನು ಬಯಸೋಣವೆ? ○




# ಕಾಗೆ ರಾಜ



ಒಂದಗಳ ಅನ್ನ ಕಂಡರೂ
ನಿನ್ನವರ ಕರೆದು ಎಲ್ಲರ
ಜೊತೆಗೂಡಿ ನೀ ತಿನ್ನುವೆ

ನಿಮ್ಮಲ್ಲಿ ಯಾರಿಗಾದರೂ
ಅನಾಹುತವಾದರೆ ಎಲ್ಲರ
ಸೇರಿಸಿ ಒಟ್ಟಾಗಿ ಜೋರಾಗಿ
ದೊಡ್ಡ ರೋಧನವ ಮಾಡುವೆ

ಒಂಟಿ ಜೀವನ ನಿನ್ನದಲ್ಲ
ಸ್ವಾರ್ಥ ಕಪಟ ಕಾಣಲಿಲ್ಲ
ಸಮಾನತೆ – ಸಹಬಾಳ್ವೆಯ
ಬದುಕು ನಿಮ್ಮಲ್ಲಿ ತುಂಬಿದೆಯಲ್ಲ

ಕೋಗಿಲೆ ಕಂಠ ಇರದಿದ್ರೇನು
ಚಂದದ ಬಣ್ಣ ಇಲ್ಲವಾದ್ರೇನು
ನಿನ್ನ ಬಾಯಿಂದ ಬರುವ
ಕಾ...ಕಾ...ಕಾ... ಉಚ್ಚಾರಣೆ
ನೆನಪು ಮಾಡಿಸುವುದು
ಕನ್ನಡದ ಅಕ್ಷರಮಾಲೆ

ಅದೆಷ್ಟೋ ಜನ
ಕನ್ನಡದ ನೆಲ ಜಲ ಉಪ್ಪುಂಡು
ಕನ್ನಡವ ಮರೆತಿರುವುದುಂಟು
ಕಾಗೆರಾಜ, ನಿನ್ನ ನೋಡಿ ನಾವೆಲ್ಲ
ಕಲಿಯುವುದು ಬಹಳ ಬಹಳುಂಟು

– ಎಚ್.ಕೆ.ಕೊಟ್ರಪ್ಪ